

ಮನೆಯೊಳಗೆ ಬಂದಿದೆ. ಇದು ಹಲ್ಲಿ, ಅರಣೆ, ಓತಿಕ್ಯಾತ ಜಾತಿಗೆ ಸೇರಿದ ಪ್ರಾಣಿ. ಆದರೆ ಅವೆಲ್ಲವುಗಳಿಗಿಂತಲೂ ದೊಡ್ಡದು. ಉಡ ಮನೆಯೊಳಗೆ ಹೊಕ್ಕರೆ ಅನಿಷ್ಟ, ಮನೆಯ ಅವಸಾನವಾಗುತ್ತದೆ ಎಂಬ ನಂಬಿಕೆ ಜನರಲ್ಲಿದೆ. ಉಡದ ಹಿಡಿತ ಬಹಳ ಬಿಗಿ. ಅದರ ಸೊಂಟಕ್ಕೆ ವಿಶೇಷ ಶಕ್ತಿ ಇದೆ. ಹಿಂದೆ ಶಿವಾಜಿ ಮಹಾರಾಜ ಮತ್ತು ಅವನ ಸೈನಿಕರು ಉಡದ ಸೊಂಟಕ್ಕೆ ಹಗ್ಗ ಕಟ್ಟಿ ಅದರ ಸಹಾಯದಿಂದ ದೊಡ್ಡದೊಡ್ಡ ಕೋಟೆಯ ಗೋಡೆಯನ್ನು ಹತ್ತುತ್ತಿದ್ದರಂತೆ' ಎಂದು ನನಗೆ ಗೊತ್ತಿದ್ದ ಜ್ಞಾನವನ್ನು ಹೇಳಿದೆ.

ನನ್ನ ಉತ್ತರವನ್ನು ಆಸಕ್ತಿಯಿಂದ ಕೇಳುತ್ತಿದ್ದ ಅವನಿಗೆ, 'ಓಡಿ ಓಡಿ ಅದಕ್ಕೆ ಆಯಾಸವಾಗಿದೆ. ಮಲಗಲಿ ಬಿಡು' ಎಂದು ಹೇಳಿ ನಾನು ಉಳಿದ ತರಕಾರಿಯನ್ನು ಕತ್ತರಿಸಲು ಅಡುಗೆಕೋಣೆಗೆ ಹಿಂದಿರುಗಿದೆ. ಸ್ವಲ್ಪ ಹೊತ್ತಿನಲ್ಲಿ ಮಗ ಬಂದು 'ಅಮ್ಮಾ... ಅದು ಅಲ್ಲಿಂದ ಹೊರಟು ಸೀದಾ ಮನೆಯೊಳಗೆ ಸೇರಿಕೊಂಡಿದೆ' ಎಂದು ಹೇಳಿದ.

'ಛೆ! ಈಗ ಏನು ಮಾಡುವುದು? ನೀನು ಅದನ್ನು ಹೊರಗೆ ಓಡಿಸುವುದಲ್ಲವಾ' ಎಂದು ಜೋರು ಮಾಡಿದೆ. 'ನಾನು ಅದು ಹೊರಗೆ ಹೋಗುವ ಜಾಗದಲ್ಲೇ ನಿಂತುಕೊಂಡಿದ್ದೆ. ಹಾಗಾಗಿ ಅದು ಮನೆ ಒಳಗೆ ಹೋಗಿದೆ. ನನಗೆ ಅದು ಒಳಗೆ ಹೋಗಬಹುದು ಎಂದು ತಲೆಗೆ ಹೋಗಲಿಲ್ಲ' ಎಂದ. 'ಅದು ನಮಗೆ ಏನೂ ಮಾಡುವುದಿಲ್ಲ ನಿಜ. ಆದರೆ ಕತ್ತಲೆಯಲ್ಲಿ ನಮಗೆ ಗೊತ್ತಾಗದೆ ಅದಕ್ಕೆ ಮೆಟ್ಟಿ ಹೋದರೆ ಏನು ಮಾಡುವುದು? ಆಗ ಅದು ಜೀವಭಯದಲ್ಲಿ ಕಚ್ಚಲಿಕ್ಕಿಲ್ಲವಾ?' ಕೇಳಿದೆ. 'ಕಚ್ಚಿದರೆ ಕಚ್ಚಲಿ' ಎನ್ನುತ್ತಾ ಅವನು ಬೈಕ್ ಹತ್ತಿ ಮನೆಯಿಂದ ಹೊರಗೆ ಹೋದ.

ಅಷ್ಟರಲ್ಲಿ ತೋಟಕ್ಕೆ ಹೋಗಿದ್ದ ಗಂಡ 'ಏನದು ಗಲಾಟೆ, ತೋಟಕ್ಕೆ ಕೇಳುತ್ತಿತ್ತು! ಏನಾಯಿತು?' ಎನ್ನುತ್ತಾ ಬಂದರು. ನಾನು 'ಏನಿಲ್ಲ. ಮನೆಯೊಳಗೆ ಉಡ ಹೊಕ್ಕಿದೆ. ಈಗ ಅದು ಎಲ್ಲಿ ಹೋಗಿದೆ ಎಂದು ಗೊತ್ತಾಗುತ್ತಿಲ್ಲ' ಎಂದು ಹೇಳಿದೆ. ಒಮ್ಮೆಲೆ ರೌದ್ರಾವತಾರ ತಾಳಿದ ಗಂಡ, 'ಉಡ ಮನೆಯೊಳಗೆ ಹೊಕ್ಕರೆ ಹಾಳು ಎಂಬ ಮಾತೇ ಇದೆ. ಸೊಸೆ ಬಂದು ಮನೆ ಏಳಿಗೆ ಆಗದೆ ಇದ್ದರೆ ಅವಳು ಬಂದದ್ದೇ ಬಂದದ್ದು ಮನೆಗೆ ಉಡು ಹೊಕ್ಕ ಹಾಗೆ ಆಗಿದೆ ಎಂದು ಜನ ಆಡಿಕೊಳ್ಳುವುದನ್ನು ನೀನು ಕೇಳಿಲ್ಲವಾ? ಉಡ ಹೊಕ್ಕ ಮನೆಯ ಅವಸಾನ ಆಗುವುದಂತೂ ಗ್ಯಾರಂಟಿ. ಅದನ್ನು ಯಾಕೆ ಒಳಗೆ ಬರಲು ಬಿಟ್ಟದ್ದು? ಯಾರಾದರೂ ಉಡವನ್ನು ಮನೆಯೊಳಗೆ ಬರಲು ಬಿಡುತ್ತಾರಾ? ನೀವು ಸಾಹಿತಿಗಳೇ ಹೀಗೆ. ನಿಮಗೆ ಬುದ್ಧಿ ಇಲ್ಲ. ಹಿರಿಯರ ಮಾತಿನಲ್ಲಿ ನಂಬಿಕೆ ಇಲ್ಲ. ಹೋಗು... ಹೋಗು ಅದು ಎಲ್ಲಿದೆಯೆಂದು ಹುಡುಕು' ಎಂದು ರೇಗಾಡಿದರು.

ನಾನು ಇನ್ನೇನು ಹುಡುಕಲು ಹೊರಡಬೇಕೆನ್ನುವಷ್ಟರಲ್ಲಿ ಅದುವೇ ಎಲ್ಲಿಂದಲೋ ಪ್ರತ್ಯಕ್ಷವಾಗಿ ನನ್ನ ಎದುರು ಭಾಗದ ಹೊಸ್ತಿಲ ಮೇಲೆ ಪುಟ್ಟ ಮಗುವಿನಂತೆ ಕುಳಿತಿತು. 'ಓಯ್ ಬನ್ನಿ. ಅದು ಇಲ್ಲಿದೆ' ಎಂದು ಗಂಡನನ್ನು ಕರೆದೆ. 'ಓಡು, ಕೋಲು ತಾ' ಎಂದು ಅಲ್ಲಿಂದಲೇ ಕೂಗಿ ಹೇಳಿದರು. 'ನೀವೇ ತನ್ನಿ. ನಾನು ಇಲ್ಲಿಂದ ಹೋದರೆ ಅದು ಮತ್ತೆ ಕಾಣೆ ಆಗಬಹುದು. ಆಗ ಅದನ್ನು ಪುನಃ ಹುಡುಕುವುದು ಯಾರು?' ಎಂದು ಅದನ್ನು ಕಾಯುತ್ತಾ ಅಲ್ಲೇ ನಿಂತೆ. ಈಗ ಅದು ಸೋಫಾ ಅಡಿಭಾಗಕ್ಕೆ ಹೋಯಿತು.

ಉದ್ದನೆಯ ಕೋಲಿನೊಂದಿಗೆ ಬಂದ ಗಂಡ 'ಎಲ್ಲಿದೆ? ತೋರಿಸು' ಎಂದು ಹೇಳುತ್ತ ಅಲ್ಲಿಗೆ ಬಂದರು. ನಾನು ಕೈ ಉದ್ದ ಮಾಡಿ 'ಅಲ್ಲಿ' ಎಂದು ಸೋಫಾದ ಅಡಿಭಾಗವನ್ನು ತೋರಿಸಿದೆ. ಆದರೆ ಅದು ಅಲ್ಲಿ ಇರಲಿಲ್ಲ. 'ಅಡುಗೆಮನೆ ಬಾಗಿಲು, ಉಪ್ಪರಿಗೆ ಬಾಗಿಲು, ದೇವರ ಕೋಣೆಯ ಬಾಗಿಲು... ಹೀಗೆ ಎಲ್ಲಾ ಕೋಣೆಯ ಬಾಗಿಲುಗಳನ್ನು ಹಾಕು' ಎನ್ನುತ್ತ ಗಂಡ ಅಲ್ಲೇ ಪಕ್ಕದಲ್ಲಿರುವ ನಮ್ಮ ಮಲಗುವ ಕೋಣೆಗೆ ಕೋಲು ಹಿಡಿದುಕೊಂಡು ಹೋದರು. 'ಬೇರೆ ಎಲ್ಲೂ ಹೋಗಲು ಸಾಧ್ಯ ಇಲ್ಲ. ಅದೇ ಕೋಣೆಯಲ್ಲಿ ಇರಬಹುದು' ಎಂದೆ.

ನಾನು ಹೇಳಿದಂತೆ ಅದು ಮಂಚದಡಿ ಮಲಗಿತ್ತು. ಅದನ್ನು ಅಲ್ಲಿಂದ ಕೋಲಿನ ಮೂಲಕ ಹೊರಗೆಳೆದು ಗಂಡ ಅದರ ತಲೆಗೆ ಒಂದು ಹೊಡೆದರು. ಹೊಡೆಯಬೇಡ ಎಂಬಂತೆ ತಲೆ ಎತ್ತಿ ಅದು ದಯನೀಯವಾಗಿ ನಮ್ಮನ್ನೇ ನೋಡಿತು. ಗಂಡ ಅದನ್ನು ಹೊಡೆಯಬಹುದು ಎಂದು ನಾನು ಅಂದುಕೊಂಡಿರಲಿಲ್ಲ. ಅದನ್ನು ಕೋಲಿನ ಸಹಾಯದಿಂದ ಮನೆಯಿಂದ ಹೊರಗೆ ಓಡಿಸಬಹುದು ಎಂದು ಎಣಿಸಿದ್ದೆ. ಅಷ್ಟರಲ್ಲಿ ಇನ್ನೊಂದು ಪೆಟ್ಟು ಕೊಟ್ಟರು. ಅದು ಒಮ್ಮೆಗೆ ವಿಲವಿಲನೆ ಒದ್ದಾಡಿತು. ಆಮೇಲೆ ಸ್ತಬ್ಧವಾಯಿತು. ಅದರ ಕಳೇಬರವನ್ನು ತೋಡಿಗೆ ಎಸೆಯುವಂತೆ ನನಗೆ ಆದೇಶಿಸಿದರು. ನಾನು ಕಸಬರಿಗೆಯಲ್ಲಿ ಅದನ್ನು ಎತ್ತಿ ಭಾರವಾದ ಹೃದಯದಿಂದ ತೋಡಿನಲ್ಲಿ ಬಿಟ್ಟೆ. ತೋಡಿನ ನೀರಿನೊಂದಿಗೆ ನನ್ನ ಕಣ್ಣ ಹನಿಯೂ ಸೇರಿತು.

ಅದೇ ಸಮಯಕ್ಕೆ ಹೊರಗೆ ಹೋಗಿದ್ದ ಮಗ ಬಂದ. 'ಸಿಕ್ಕಿತಾ ಉಡ?' ಕೇಳಿದ. 'ಹುಂ ಅಪ್ಪ ಅದನ್ನು ಹೊಡೆದು ಕೊಂದರು' ಎಂದೆ. 'ನಾನು ಅದನ್ನು ಹೊರಗೆ ಓಡಿಸದೆ ತಪ್ಪು ಮಾಡಿದೆ' ಎಂದ. ಅವನ ಧ್ವನಿಯಲ್ಲಿ ಪಶ್ಚಾತ್ತಾಪ ಇಣುಕುತ್ತಿತ್ತು.

'ನಾನೂ ತಪ್ಪು ಮಾಡಿದೆ. ಅದನ್ನು ಗೋಣಿಯಲ್ಲಿ ಹಿಡಿದು ಕಾಡಿಗೆ ಬಿಡಬೇಕಿತ್ತು. ಅನ್ಯಾಯವಾಗಿ ಕೊಂದುಬಿಟ್ಟೆ. ಆ ಕ್ಷಣದಲ್ಲಿ ನನಗೆ ಏನು ಮಾಡಬೇಕೆಂದು ಗೊತ್ತಾಗಲಿಲ್ಲ' ಎಂದು ಗಂಡ ನಿಟ್ಟುಸಿರುಬಿಡುತ್ತ ಹೇಳಿದರು. 'ಉಡ ಮನೆಯೊಳಗೆ ಹೊಕ್ಕರೆ ಮನೆಯ ಅವಸಾನ ಅಲ್ಲ. ಉಡದ ಅವಸಾನ' ನಾನು ದುಃಖದಿಂದ ಹೇಳಿದೆ.

ಇದಾಗಿ ಈಗ ತಿಂಗಳುಗಳೇ ಕಳೆದುಹೋಗಿವೆ. ಉಡ ಮಾತ್ರ ನಿನ್ನೆಮೊನ್ನೆ ಬಂದಂತೆ ಕಣ್ಣಿಗೆ ಕಟ್ಟುತ್ತಿದೆ. ಅದು ಇನ್ನು ಇಲ್ಲ, ಅದನ್ನು ಸಾಯಿಸಬಾರದಿತ್ತು ಎಂದು ಮನಸ್ಸು ಮೌನವಾಗಿ ರೋದಿಸುತ್ತದೆ.

**ಪ್ರತಿಕ್ರಿಯಿಸಿ: feedback@sudha.co.in**

